ದಿನಾಂಕ 13-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸ ವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಜಿ ಎಮ್ ಹೆಚ್ ರವರಿಂದಃ**

ನಿ.ಪಿ-2 ಕ್ಕೆ ನನ್ನ ಯಾವುದೇ ತಕರಾರು ಇಲ್ಲ . ಸರ್ವೆ ನಂಬರ 1/1 ರ ನೀವು ಮಾಲೀಕರು ಅಲ್ಲ ಎಂದರೆ ಸಾಕ್ಷಿಯು ಮುಂಚೆ ಆಗಿದ್ದೆ 2006 ರಲ್ಲಿ ಪೋಡಿ ಆದ ನಂತರ ಅದು ಸರ್ವೆ ನಂಬರ 1/28 ಆಗಿರುತ್ತದೆ . ಅದರ ಮಾಲೀಕ ನಾನು ಇರುತ್ತೇನೆ . ಹಾಗಾಗಿ ಸರ್ವೆ ನಂಬರ 1/1 ರ ಯಾವುದೇ ಭಾಗ ದಾವಾಸ್ತಿ ಅಲ್ಲ ಎಂದರೆ ಸಾಕ್ಷಿಯು ಈಗ ಅದು ಸರ್ವೆ ನಂಬರ 1/28 ಆಗಿದೆ ಎಂದು ಉತ್ತರಿಸುತ್ತಾರೆ . ಸರ್ವೆ ನಂಬರ 1/1 ಕ್ಷೇತ್ರ 14 ಗುಂಟೆ ಇದೆ ಎಂದರೆ ರಮಾಕಾಂತ ಸೀತಾರಾಮ ಹೆಗಡೆರವರ ಮಾಲೀಕತ್ವದ ಆಸ್ತಿಯಾಗಿರುತ್ತದೆ. ಹಾಗಾಗಿ ದಾವಾಸ್ತಿಯು ಸರ್ವೆ ನಂಬರ 1/1 ರ ಭಾಗವಾಗಿರುವುದರಿಂದ ನೀವು ಮಾಲೀಕರಲ್ಲ ಎಂದರೆ ಸರಿಯಲ್ಲ . ಆದ್ದರಿಂದ ದಾವಾದಲ್ಲಿ ಕೇಳಿದಂತಹ ಪರಿಹಾರಕ್ಕೆ ನೀವು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ . ನಿ.ಡಿ-2 ರ ಪ್ರಕಾರ ಸರ್ವೆ ನಂಬರ 220 ರಲ್ಲಿ ಪ್ರತಿವಾದಿಯವರು ವಾಸ್ತವ್ಯದ ಮನೆ ಬರುತ್ತದೆ ಎಂದರೆ ಸಾಕ್ಷಿಯು ಭಾಗಶಃ ಬರುತ್ತದೆ ಎಂದು ಉತ್ತರಿಸುತ್ತಾರೆ . ಅವರ ಮನೆಯ ಉತ್ತರ ದಿಕ್ಕಿನಲ್ಲಿ ಸರ್ವೆ ನಂಬರ 220 ರಲ್ಲಿ ಮನೆ ಹಾಗೂ ಬಚ್ಚಲು ಮನೆ ದುರಸ್ತಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಸರ್ವೆ ನಂಬರ 1/28 ರಲ್ಲಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ . ನೀವು ಹಾಜರುಪಡಿಸಿರುವ ನಿ.ಪಿ-5 ಮತ್ತು 6

ಸರ್ವೆ ನಂಬರ 220 ಕ್ಕೆ ಸಂಬಂಧಪಟ್ಟಂತೆ ಎಂದರೆ ಸರಿಯಲ್ಲ . ಪ್ರತಿವಾದಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿದ್ದಿರಿ ಎಂದರೆ ಸರಿಯಲ್ಲ .

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಲಾಯಿತು.)

ಓ.ಹೆ.ಕೆ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಶಿರಸಿ.